	(ಸದರಿಯವರು ದಾಳಿ ನಡೆಯುವ ಮೊದಲು ತನಿಖಾ ಠಾಣೆಯ ಹೊರಗಡೆ ಕಾರ್ಯನಿರ್ವಹಿಸುತ್ತಿದ್ದು, ಅನಾರೋಗ್ಯದ ನಿಮಿತ್ತ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಹೋಗಿದ್ದರು) ಶ್ರೀ ಎನ್.ಎಸ್. ಕೃಷ್ಣಮೂರ್ತಿ ಗುಪ್ತ, ಮೋ.ವಾ.ನಿ., ಪ್ರಾ.ಸಾ.ಕ., ಬಿಜಾಪುರ (ನಿವೃತ್ತಿಯಾಗಿರುತ್ತಾರೆ)	ಲೋಕಾಯುಕ್ತದಿಂದ ಇದುವರೆಗೂ ಯಾವುದೇ ವರದಿ ಬಂದಿರುವುದಿಲ್ಲ
10-1-2010	ಶ್ರೀ ಚಂದ್ರಕಾಂತ ದೇವೇಂದ್ರಪ್ಪ ಅಥರ್ಗಾ, ಹಿ.ಮೋ.ವಾ.ನಿ., ಸ.ಪ್ರಾ.ಸಾ.ಕ., ಗೋಕಾಕ್ (ಸೆಪ್ಟೆಂಬರ್ 2009 ರಿಂದ ನಿಯೋಜನೆ ಮೇಲೆ ಪ್ರಾ.ಸಾ.ಕ., ಬಿಜಾಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದರು) ಶ್ರೀ ರಾಮಸ್ವಾಮಿ ರಾಂಗೇಗೌಡ, ಮೋ.ವಾ.ನಿ., ಪ್ರಾ.ಸಾ.ಕ., ಬಿಜಾಪುರ	ರೂ. 9,430/-

ರಾಜ್ಯದಲ್ಲಿಯ ರಸ್ತೆ ಸಾರಿಗೆ ನಿಗಮಗಳು

510 (995) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) :- ಮಾನ್ಯ ಸಾರಿಗೆ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ರಸ್ತೆ ಸಾರಿಗೆ ನಿಗಮಗಳು ಯಾವುವು ?

ಆ) ಈ ಪ್ರತಿಯೊಂದು ನಿಗಮದಲ್ಲಿ ಬಸ್ಸುಗಳು ಓಡಾಡುವುದರಿಂದ ಪ್ರತಿ ವರ್ಷ ಬರುವ ಆದಾಯವೆಷ್ಟು ಹಾಗೂ ಬಸ್ಸುಗಳಿಗೆ ಆಗುವ ವೆಚ್ಚವೆಷ್ಟು ?

ಇ) ಈ ಪ್ರತಿಯೊಂದು ನಿಗಮದಲ್ಲಿ ಪ್ರತಿ ವರ್ಷ ಮಾರಾಟ ಮಳಿಗೆ, ಕಟ್ಟಡ ಬಾಡಿಗೆ ಹಾಗೂ ಬಸ್ಸುಗಳಿಂದ ಹೊರತುಪಡಿಸಿ ಉಳಿದ ಮೂಲಗಳಿಂದ ಬರುವ ಆದಾಯವೆಷ್ಟು ?

ಶ್ರೀ ಆರ್. ಅಶೋಕ್ : (ಸಾರಿಗೆ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):-

ಅ) ರಾಜ್ಯದಲ್ಲಿರುವ ರಸ್ತೆ ಸಾರಿಗೆ ಸಂಸ್ಥೆಗಳು ಕೆಳಕಂಡಂತಿವೆ.

1) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು.

2) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು.

3) ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ.

4) ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲ್ಬರ್ಗ.

ಆ) (ರೂ. ಕೋಟಿಗಳಲ್ಲಿ)

ಸಂಸ್ಥೆ	ಸಾರಿಗೆ ಆದಾಯ		ಕಾರ್ಯಾಚರಣೆ ವೆಚ್ಚ	
	2008–09	2009–10	2008–09	2009–10
K.S.R.T.C.	1429.54	1515.06	1513.75	1628.52
B.M.T.C.	907.50	1012.29	929.82	1047.95

N.W.K.R.T.C.	863.15	847.43	1006.38	965.78
N.E.K.R.T.C.	512.25	600.31	589.71	695.00

ಇ) ಸಾರಿಗೆ ಸಂಸ್ಥೆಗಳಲ್ಲಿ ಮರಾಟ ಮಳಿಗೆ, ಕಟ್ಟಡ ಬಾಡಿಗೆ, ಬಸ್ಸುಗಳಿಂದ ಹೊರತುಪಡಿಸಿ, ಇತರೆ ಮೂಲಗಳಿಂದ ಆದಾಯ ಬರುತ್ತಿದ್ದು, ವಿವರ ಈ ರೀತಿ ಇದೆ.

(ರೂ. ಕೋಟಿಗಳಲ್ಲಿ)

ಸಂಸ್ಥೆ	2008–09	2009–10
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ	172.52	191.21 (ಅಂದಾಜು)
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ	81.87	68.00
ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	11.87	11.33
ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	45.05	54.62

ಆರ್.ಟಿ.ಓ. ಚೆಕ್‌ಪೋಸ್ಟ್ ಆದಾಯ

512 (997) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) :– ಮಾನ್ಯ ಸಾರಿಗೆ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲಿ 2007–08 ರಿಂದ 2009–10ರಲ್ಲಿ ನೋಂದಾಯಿಸಲ್ಪಟ್ಟ ವಿವಿಧ ಮಾದರಿಯ ಮೋಟಾರು ವಾಹನಗಳ